# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ.

## ಸತ್ರ ಪ್ರಕರಣ ಸಂಖ್ಯೆ: ಎಸ್.ಸಿ.46/2026

**ಪಿರ್ಯಾದಿ:** ಹಾವೇರಿ ಶಹರ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿತರು:**

1. ಅರುಣ ಬಸವರಾಜ ಬಡ್ನಿ
   ವಯಾಃ 26 ವರ್ಷ
   ಸಾಃನಂ.179/190/3 ಬಡ್ನಿ ಚಾಳ,
   ಕೇಶ್ವಾಪುರ, ಹುಬ್ಬಳ್ಳಿ
2. ನಾಗರಾಜ ಫಕ್ಕೀರಪ್ಪ ದೊಡವದ
   ವಯಾಃ 23 ವರ್ಷ,
   ಸಾಃ ಬಸವೇಶ್ವರ ನಗರ, ಗರಗ, ಧಾರವಾಡ
3. ಚೇತನ ಅಣ್ಣಪ್ಪ ಹನಗಿ
   ವಯಾಃ 26 ವರ್ಷ,
   ಸಾಃ ಕೆರೆ ದಂಡಿ ಓಣಿ, ನಾಗಶೆಟ್ಟಿಕೊಪ್ಪ
   ಕೇಶ್ವಾಪುರ, ಹುಬ್ಬಳ್ಳಿ
4. ಅಕ್ಷಯ ಅಶೋಕ ಕುರಿಯವರ
   ವಯಾಃ 27 ವರ್ಷ,
   ಕಲ್ಲಣ್ಣನವರ ಓಣಿ, ಬೆಂಗೇರಿ ಶಾಂತಿ ನಗರ
   ಕೇಶ್ವಾಪುರ, ಹುಬ್ಬಳ್ಳಿ
5. ಶೇಖರ ಮಾರುತಿ ಗೊಸವಿ
   ವಯಾಃ 28 ವರ್ಷ,
   ಭಜಂತ್ರಿ ಓಣಿ, ನಾಗಶೆಟ್ಟಿಕೊಪ್ಪ
   ಕೇಶ್ವಾಪುರ, ಹುಬ್ಬಳ್ಳಿ
6. ಅಭಿಷೇಕ ತಿಮಲಪ್ಪ ಬಿಲಾನ
   ವಯಾಃ 22 ವರ್ಷ,
   ಸಾಃ ಗೊಲ್ಲರ ಕಾಲೋನಿ, ಹುಬ್ಬಳ್ಳಿ

## ದೋಷಾರೋಪಣೆ

ಶ್ರೀ ಎನ್.ಎಂ. ರಮೇಶ, ಬಿ.ಕಾಂ. ಎಲ್.ಎಲ್.ಬಿ., ಎಲ್.ಎಲ್.ಎಂ. ಹಾವೇರಿಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎಂಬ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಹೊರಿಸುವ ದೋಷಾರೋಪಣೆಗಳೇನೆಂದರೆ,

1. ಈ ಪ್ರಕರಣದ 1 ನೇ ಆರೋಪಿಯಾದ ನೀವು ಮತ್ತು ಚಾಸಾ-9- ರಂಜಿತಾ 3-4 ವರ್ಷಗಳಿಂದ ಲವ್ ಮಾಡುತ್ತಾ ಬಂದಿದ್ದು, ಪಿರ್ಯಾದಿ ಚೇತನ ಅರಗೋಳ ಮತ್ತು ರಂಜಿತಾ ಹಳೇಮನಿ ಇವರು ಹಾವೇರಿಯ ಜಿ.ಹೆಚ್ ಕಾಲೇಜಿನಲ್ಲಿ ಬಿ.ಕಾಂ. ತೃತೀಯ ವರ್ಷ ವ್ಯಾಸಂಗ ಮಾಡುತ್ತಿದ್ದು, ಒಬಬರಿಗೊಬ್ಬರು ಸ್ನೇಹಿತರಿದ್ದು, ಕಂಪ್ಯೂಟರ್ ಕ್ಲಾಸಿಗೂ ಸಹ ಹೋಗುತ್ತಿದ್ದು, 1 ನೇ ಆರೋಪಿಯಾದ ನೀವು ಚಾಸಾ-9 ರವರಿಂದ ಪಿರ್ಯಾದಿಯ ಮೊಬೈಲ್ ನಂಬರ್ ಪಡೆದುಕೊಂಡು ದಿನಾಂಕ:01.04.2025 ರಂದು 1 ನೇ ಆರೋಪಿಯಾದ ನೀವು ಪಿರ್ಯಾದಿದಾರ ಚೇತನ ಅರಗೋಳ ಇವರಿಗೆ ಫೋನ್ ಮಾಡಿ ಸಂಜೆ 5.30 ಗಂಟೆ ಸುಮಾರಿಗೆ ಹಾವೇರಿಯ ಟಿಎಂಎಇ ಕಾಲೇಜು ಹಳೇ ಪಿ.ಬಿ ರಸ್ತೆ ಹತ್ತಿರ ಬರುವಂತೆ ತಿಳಿಸಿ ನಂತರ 06.00 ಗಂಟೆ ಸಮಯಾರಿಗೆ ಆರೋಪಿತರಾದ ನೀವೆಲ್ಲರೂ ಪಿರ್ಯಾದಿಗೆ ಕೆ.ಎ-25/ಎಂಪಿ-4104 ನೇ ಕಾರಿನಲ್ಲಿ ಕಿಡ್ನಾಪ್ ಮಾಡಿಕೊಂಡು ಹೋಗಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಜಗಳ ತೆಗೆದಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ.137(2) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

2. ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಪಿರ್ಯಾದಿಯನ್ನು ಹಾವೇರಿ ಹೊಯ್ಸಳ ಬಾರಿನ ಹತ್ತಿರ ಕರೆದುಕೊಂಡು ಹೋಗಿ ರಂಜಿತಾಳಿಗೆ ಏನಾಗಬೇಕು ಅಂತಾ ಪದೇ-ಪದೇ ಪ್ರಶ್ನೆ ಮಾಡಿ

ದೇವಿಹೊಸೂರು ರಸ್ತೆ ಕ್ರಾಸ್ ಹೊಲದ ಹತ್ತಿರ ಕರೆದುಕೊಂಡು ಹೋಗಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಜಗಳ ತೆಗೆದಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ.189(2) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

3. ಮೂರನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿ ಜೊತೆ ಜಗಳ ತೆಗೆದು, ದೊಂಬಿ ಎಬ್ಬಿಸಿದ್ದು ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ.191(2) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

4. ನಾಲ್ಕನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿದಾರನೊಂದಿಗೆ ಜಗಳ ತೆಗೆದು ಮಾರಕಾಸ್ತ್ರಗಳಾದ ಕೋಲುಗಳನ್ನು ಹಿಡಿದುಕೊಂಡು ಬಂದು ದೊಂಬಿ ಎಬ್ಬಿಸಿದ್ದು ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ.191(3) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

5. ಐದನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿದಾರನೊಂದಿಗೆ ಜಗಳ ತೆಗೆದು, ಕೈಯಿಂದ ಕಪಾಳಕ್ಕೆ, ಮುಷ್ಠಿ ಮಾಡಿ ಕಣ್ಣಿಗೆ ಹೊಡೆದು ಸಾದಾ ಸ್ವರೂಪದ ಗಾಯಗೊಳಿಸಿದ್ದು, ಆ

ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ.115(2) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

6. ಆರನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಯೊಂದಿಗೆ ಜಗಳ ತೆಗೆದು, 1 ನೇ ಆರೋಪಿಯಾದ ನೀವು ಕೋಲಿನಿಂದ ತಲೆಗೆ ಹೊಡೆದಿದ್ದು, 2 ರಿಂದ 5 ನೇ ಆರೋಪಿತರು ಹಸಿ ಕಟ್ಟಿಗೆಯ ಕೋಲಿನಿಂದ ಪಿರ್ಯಾದಿಯ ಬೆನ್ನಿಗೆ, ಮೈ ಕೈಗೆ ಹೊಡೆದು ತೀವ್ರ ಸ್ವರೂಪದ ಗಾಯಗೊಳಿಸಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ. 118(1) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

7. ಏಳನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಯೊಂದಿಗೆ ಜಗಳ ತೆಗೆದು, ಹಲ್ಲೆ ಮಾಡಿದಾಗ ಆತನು ತಪ್ಪಿಸಿಕೊಂಡು ಓಡಿ ಹೋದಾಗ ಮತ್ತೆ ಆತನನ್ನು ಕಾರಿನಲ್ಲಿ ಹತ್ತಿಸಿಕೊಂಡು ಸಿದ್ಧರಾಮೇಶ್ವರ ಕಲ್ಯಾಣ ಮಂಟಪದ ಹತ್ತಿರ ರಸ್ತೆಯ ಮೇಲೆ ಪಿರ್ಯಾದಿಯ ಮೊಬೈಲ್ ನ್ನು ಕಸಿದುಕೊಂಡು ಕಾರಿನಿಂದ ದೂಡಿ ಸುಲಿಗೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ.309(6) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

8. ಎಂಟನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಯೊಂದಿಗೆ ಜಗಳ ತೆಗೆದು, ಕೋಲಿನಿಂದ ತಲೆಗೆ, ಬೆನ್ನಿಗೆ, ಮೈ ಕೈಗೆ ಮಾರಣಾಂತಿಕ ಹಲ್ಲೆ ಮಾಡಿ, ಕೊಲೆ ಮಾಡಲು ಪ್ರಯತ್ನಿಸಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ.109(1) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

9. ಒಂಭತ್ತನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಯೊಂದಿಗೆ ಜಗಳ ತೆಗೆದು, ಇನ್ನೊಮ್ಮೆ ರಂಜಿತಾಳ ತಂಟೆಗೆ ಬಂದರೆ ನಿನ್ನನ್ನು ಕೊಲ್ಲುತ್ತೇವೆಂದು ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ.351(3) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

ಈ ಮೇಲಿನ ಎಲ್ಲಾ ದೋಷಾರೋಪಣೆಗಳಿಗೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೊಳಪಡುತ್ತೀರ.

ದಿನಾಂಕಃ13.07.2026
ಹಾವೇರಿ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು
ಹಾವೇರಿ.